KARNATAKA REGIONAL ORGANISATION FOR SOCIAL SERVICE
KROSS

ಖಾಸಗಿ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 19 ಅಕ್ಟೋಬರ್ 2014 – ಡಿಸೆಂಬರ್ 2014





## ‘ಸ್ವಚ್ಛ ಭಾರತದತ್ತ ನಮ್ಮೆಲ್ಲರ ಚಿತ್ತ’

ಸ್ವಚ್ಛ ಭಾರತ

ಸ್ವಚ್ಛ ಭಾರತದತ್ತ ಒಂದು ಹೆಜ್ಜೆ









ಮುಖ್ಯ ಸಂಪಾದಕರು
**ಸ್ವಾಮಿ ಪೀಟರ್ ಬ್ಲ್ಯಾಂಕ್**

ಮುಖಪುಟ ವಿನ್ಯಾಸ
**ಅನೂಷ ಗ್ರಾಫಿಕ್ಸ್**

ಒಳ ಪುಟಗಳಲ್ಲಿ

**‘ಸ್ವಚ್ಛ ಭಾರತ’, ಆಗಲಿ ಅದು ಸ್ವಾಸ್ಥ್ಯ ಭಾರತಕ್ಕೆ ನಾಂದಿ**
ಶ್ರೀ ಜಿ.ಯಂ. ವರ್ಗೀಸ್

**ಸಾವಯವ ಕೃಷಿಯತ್ತ ಒಂದು ಹೆಜ್ಜೆ**
ಶ್ರೀಮತಿ ಜಾಯ್ಸ್ ಎಮ್ ಪಿರೇರ

**ಸರ್ಕಾರದ ಸವಲತ್ತುಗಳು ನಮ್ಮ ಹಕ್ಕುಗಳು**
ಶ್ರೀ ಜಿ.ಯಂ. ವರ್ಗೀಸ್

**ವಾರ್ತಾ ವಿಶೇಷ**

# ಓದುಗರೊಂದಿಗೆ ಕ್ಷಣ ಹೊತ್ತು ...

ನಾನು 90ರ ದಶಕದಲ್ಲಿ ಸಂತ ಪೇತ್ರರ ವಿದ್ಯಾಮಂದಿರದಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಆಗ, ಅಂದಿನ ರೆಕ್ಟರ್ ಹಾಗು ಪ್ರಸ್ತುತ ಪಾಂಡಿಚೇರಿಯ ಮಹಾಧರ್ಮಾಧ್ಯಕ್ಷರಾದ ಪೂಜ್ಯ ಅಂತೋಣಿ ಆನಂದರಾಯ್ ಅವರು, ಆಗಾಗ್ಗೆ ತಮ್ಮ ಪ್ರವಚನಗಳಲ್ಲಿ, ಅಮೇರಿಕದ ಲೇಖಕ ಕ್ರಿಸ್ಟೋಫರ್ ಬೋರ್ಲಿಯವರನ್ನು ಉಲ್ಲೇಖಿಸಿ ನುಡಿಯುತ್ತಿದ್ದರು, “ Cleanliness is indeed next to godliness” – ’ಶುಚಿತ್ವವು ದೈವತ್ವದ ನಂತರದ್ದು’ ಎಂದು. **ಮಹಾತ್ಮ ಗಾಂಧೀಜಿಯವರು** ದಶಕಗಳ ಹಿಂದೆಯೇ ನುಡಿದಿದ್ದರು “ಒಂದು ಕುಟುಂಬದ ಸದಸ್ಯರು ತಮ್ಮ ಮನೆಯನ್ನು ಸ್ವಚ್ಛವಾಗಿ ಇಡಬಲ್ಲರು, ಆದರೆ ತಮ್ಮ ಪಕ್ಕದ ಮನೆಯವರ ಬಗ್ಗೆ ಅವರಿಗೆ ಆಸಕ್ತಿ ಇದ್ದಂತಿಲ್ಲ”.

ಪ್ರಸ್ತುತ ಇದನ್ನೇ ನಮ್ಮ ದೇಶದ **ಪ್ರಧಾನ ಮಂತ್ರಿಯವರು** “ಸ್ವಚ್ಛ ಭಾರತ” ಎಂಬ ಮಂತ್ರವನ್ನು ಪಠಿಸಿ, ದೇಶಬಾಂಧವರಲ್ಲಿ, ಸ್ವಚ್ಛ ಭಾರತದ ಕನಸನ್ನು ಬಿತ್ತಿದ್ದಾರೆ. ರಾಜಕಾರಣಿಗಳು, ಸಿನೇಮಾ ತಾರೆಗಳು, ಪ್ರಖ್ಯಾತ ನಾಮದೇಯರು ಬೀದಿಗಳಲ್ಲಿ ಪೊರಕೆ ಹಿಡಿದು ಕ್ಯಾಮರಾಗಳಿಗೆ ಪೋಸು ಕೊಡುವುದು ಎಲ್ಲೆಂದರಲ್ಲಿ ಕಾಣುತ್ತಿದೆ.

ಸ್ವಚ್ಛತೆ ಮತ್ತು ಸುವ್ಯವಸ್ಥೆಗಳು ಶಿಕ್ಷಣದ ಭಾಗವಾಗಿವೆ ಎಂದು ಮರೆಯದಿರೋಣ. ಅದು ನೈಸರ್ಗಿಕವಾಗಿ ಬಂದಂತಹ ಹುಟ್ಟುಗುಣವಲ್ಲ ಎಂದೇ, **ಬೆಂಜಮಿನ್ ದಿಸರೇಲಿ** ನುಡಿಯುತ್ತಾನೆ, “ಶುಚಿತ್ವ ಮತ್ತು ಸುವ್ಯವಸ್ಥೆಗಳು ಸಹಜವಾಗಿ ಹುಟ್ಟಿನಿಂದ ಬಂದದ್ದಲ್ಲ, ಅದು ಶಿಕ್ಷಣ ಮುಖೇನ ಕಲಿತದ್ದು ಆಗಿದೆ. ದೊಡ್ಡ ದೊಡ್ಡ ವಿಚಾರಗಳಂತೆ, ಅದನ್ನು ಅಭಿರುಚಿಯಿಂದ ಕಲಿಯಬೇಕಿದೆ”! ಹೌದು ನಮ್ಮ ಮನೆಯ, ಗ್ರಾಮದ, ಸಮುದಾಯದ, ದೇಶದ ಸ್ವಚ್ಛತೆ ಯಾರಿಂದಲೂ ಕಲಿಸಲು ಸಾಧ್ಯವಿಲ್ಲ. ಕರೆಕೊಟ್ಟೊಡನೆ ಈಡೇರುವುದಿಲ್ಲ. ಅದಕ್ಕಾಗಿ ನಾವು ಅಂತರಂಗದಿಂದ ಪ್ರೇರಣೆಗೊಂಡು, ಕಂಕಣ ಬದ್ಧರಾಗಬೇಕಿದೆ. ಬೆಳೆಯುವ ಸಿರಿ ಮೊಳಕೆಯಲ್ಲಿ . . . . ಮನೆಯಲ್ಲಿ ಬೆಳೆಯುವ ಮಕ್ಕಳಿಗೆ ಸ್ವಚ್ಛತೆ, ಸುವ್ಯವಸ್ಥೆಯ ಬಗ್ಗೆ ತಂದೆತಾಯಿಗಳು ಕಲಿಸಿದಲ್ಲಿ, ಶಾಲೆಯ ಶಿಕ್ಷಣದಲ್ಲಿ ಶುಚಿತ್ವ, ವೈಯಕ್ತಿಕ ಸ್ವಚ್ಛತೆ, ಶಿಕ್ಷಣದ ಅವಿಭಾಜ್ಯ ಅಂಗವಾದಲ್ಲಿ, ಗ್ರಾಮದ ತ್ಯಾಜ್ಯ, ಒಂದೆಡೆ ವಿಲೇವಾರಿ ಮಾಡಲು ನಾವು ಕಲಿತಲ್ಲಿ, ನಮ್ಮ ಸುಮಾಜ, ನಮ್ಮ ಭಾರತ, ಸ್ವಚ್ಛ ಭಾರತವಾಗಲು ನಿಮಿಷಗಳು ಸಾಕು. ಆದರೆ ವ್ಯವಸ್ಥೆಗಳು ಸರಿಹೊಂದಬೇಕಿದೆ, ತ್ಯಾಜ್ಯ ವಿಲೇವಾರಿಗಾಗಿ, ಮರುಸಂಸ್ಕರಣೆಗಾಗಿ, ಶೌಚಾಲಯಗಳಿಗಾಗಿ ಮೀಸಲಿರಿಸಲ್ಪಟ್ಟ ಕೋಟ್ಯಾಂತರ ರೂಪಾಯಿಗಳು ಮಾರ್ಚ್ 31 ರೊಳಗೆ ಕಾಣೆಯಾಗುತ್ತದೆ. ಪ್ರತಿ ಮನೆಗೆ ಕಸ ಸಂಗ್ರಹಣೆಗಾಗಿ ನೀಡಬೇಕಿದ್ದ, ಕೊಳ್ಳಬೇಕಿದ್ದ ಪ್ಲಾಸ್ಟಿಕ್ ಕೈಚೀಲ/ ಬಕೆಟುಗಳು ಮತ್ತು ಇತರೇ... ಅಧಿಕಾರಶಾಹಿ ಹಾಗೂ ಅಧಿಕಾರಗಳ ಕೈಚಳಕದಿಂದ ಜನರಿಗೆ ತಲಪದೆ ಕಾಣೆಯಾಗುತ್ತದೆ ಮಾತ್ರವಲ್ಲ ಪುರಸಭೆ, ಪಟ್ಟಣ ಪಂಚಾಯಿತಿ, ಮುನ್ಸಿಪಾಲಿಟಿ/ಕಾರ್ಪೋರೇಷನ್ ಮಟ್ಟದಲ್ಲಿ ಕಸದ ರಾಶಿಗಳು ಹಿಮಾಲಯ ಪರ್ವತಗಳಾಗಿ ಕೊಳೆತು ಖಾಯಿಲೆಗಳ ಕಾರ್ಖಾನೆಗಳಾಗಿ ಮೀಸಲಿರಿಸಲ್ಪಟ್ಟ ಹಣವನ್ನಂತೂ ಸಂಪೂರ್ಣ ವ್ಯಯಿಸಲ್ಪಟ್ಟಿರುತ್ತಾರೆ. ಕಸವನ್ನೇ ದಂಧೆಯಾಗಿಸಿರುವ ಕೆಲವು ಅಧಿಕಾರಶಾಹಿ ಹಾಗೂ ಅಧಿಕಾರಗಳು, ಕಾಂಟ್ರೇಕ್ಟರುಗಳೊಂದಿಗೆ ಷಾಮೀಲಾಗಿ ಜನರನ್ನು ಕುರಿಮಂದೆಯಾಗಿಸಿರುವುದು ನಮ್ಮ ದೌರ್ಭಾಗ್ಯ. ಮಾನ್ಯ ಮೋದಿಯವರು ಇದರತ್ತ ದೃಷ್ಠಿ ಬೀರಬೇಕಿದೆ.

“ಸ್ವಚ್ಛತೆಯು ಹಂಬಲಿಸುವ ದೇಶಕ್ಕೆ ಒಂದು ಸ್ವಾತಂತ್ರ್ಯ ಸಂಗ್ರಾಮ. ಸ್ವಚ್ಛತೆಯ ಸಂಸ್ಕೃತಿಯು ವೈಯಕ್ತಿಕ ಶುಚಿತ್ವ, ಆರೋಗ್ಯ, ಸೌಂದರ್ಯ ಹಾಗು ಸುಂದರ ನೈಸರ್ಗಿಕ ಪರಿಸರವನ್ನು ದೇಶಕ್ಕೆ ನೀಡುತ್ತಾ ಹೊಸರಾಷ್ಟ್ರದ ನಾಣ್ಯವಾಗಿಸುತ್ತದೆ”, ಎನ್ನುತ್ತಾರೆ ವಿಶ್ವಾಸ್ ಚವ್ಹಾಣ್. ಹೌದು ಸ್ವಚ್ಛತೆ ತನ್ನೊಂದಿಗೆ, ಮನಸ್ಸಿನ ಪರಿಶುದ್ಧತೆಯನ್ನು, ಪರಿಶುದ್ಧ ಚಿಂತನೆಯನ್ನು ಹಾಗೂ ಪರಿಶುದ್ಧ ಹೃದಯವನ್ನು ತರಬಲ್ಲುದು!! ಬನ್ನಿ ಸ್ವಚ್ಛ ಸಮಾಜಕ್ಕಾಗಿ, ಸ್ವಚ್ಛ ಭಾರತಕ್ಕಾಗಿ ಕೈಜೋಡಿಸೋಣ.

ಇಂತೀ
**ವಂ. ಸ್ವಾಮಿ. ಪೀಟರ್ ಬ್ಲ್ಯಾಂಕ್**
ನಿರ್ದೇಶಕರು, ಕ್ರಾಸ್ ಸಂಸ್ಥೆ.

# 'ಸ್ವಚ್ಛ ಭಾರತ', ಆಗಲಿ ಅದು ಸ್ವಾಸ್ಥ್ಯ ಭಾರತಕ್ಕೆ ನಾಂದಿ

ಶ್ರೀ ಜಿ.ಯಂ. ವರ್ಗೀಸ್

ಸ್ವಚ್ಛತೆಯೆಂಬುದು ದೈವೀಕತೆಯ ಬಳಿಕದ ಸ್ಥಾನದಲ್ಲಿದೆ ಎಂಬುವುದನ್ನು ನಾವು ಅನೇಕ ಬಾರಿ ಕೇಳಿರುತ್ತೇವೆ, ಅಷ್ಟೇ ಬೇಗ ನಾವು ಅದನ್ನು ಮರೆತುಬಿಡುತ್ತೇವೆ. ಮರೆವು ಮನುಷ್ಯನಿಗೆ ಆ ಭಗವಂತನು ನೀಡಿದ ವರದಾನ. ಭಾರತದ 2014 ರ ಸ್ವಾತಂತ್ರ್ಯ ದಿನಾಚರಣೆಯಂದು ಪ್ರಧಾನಮಂತ್ರಿ ಕೆಂಪುಕೋಟೆಯ ಮೇಲೆ ನಿಂತು ಶುಚಿತ್ವದ ಕುರಿತು ಒತ್ತಿ ಹೇಳುವ ಪರಿಸ್ಥಿತಿ ಇನ್ನೂ ಇದೆಯಲ್ಲ! ಏಕೆ? ಇದು ಈ ದೇಶದ ಪ್ರಜೆಗಳಾದ ನಾವು ನಮ್ಮೊಳಗೆ ಪ್ರಶ್ನಿಸುವ ಪರ್ವ ಕಾಲ.

ಅಕ್ಟೋಬರ್ 2 ರಂದು ನಾವು 'ಸ್ವಚ್ಛ ಭಾರತ' ಅಭಿಯಾನವನ್ನು ಪ್ರಾರಂಭಿಸಿದ್ದೇವೆ. ಇದೊಂದು ಸಾಮೂಹಿಕ ಆಂದೋಲನ /ಚಳುವಳಿಯಾಗಿದ್ದು 'ಸ್ವಚ್ಛ ಭಾರತ'ದ ಆಶಯ ಹೊಂದಿದೆ. ಸ್ವಚ್ಛತೆ ಇಂದು ಜೀವನದ ಭಾಗವಾಗಬೇಕಿದೆ. ಸ್ವಚ್ಛತೆ ಎಂಬುದು ಮಹಾತ್ಮಗಾಂಧಿಯವರ ಹೃದಯಕ್ಕೆ ತೀರಾ ಹತ್ತಿರವಾಗಿದ್ದ ವಿಚಾರ. 2019ರಲ್ಲಿ ಬಾಪೂ ಅವರ 150ನೆಯ ಜನ್ಮ ದಿನವನ್ನು ಆಚರಿಸುವ ಸಂದರ್ಭದಲ್ಲಿ 'ಸ್ವಚ್ಛ ಭಾರತ' ಈ ಮೂಲಕ ನಾವು ಅವರಿಗೆ ನೀಡುವ ಅತ್ಯುತ್ತಮ ಗೌರವವಾಗಿರುತ್ತದೆ. ಭಾರತ 'ಸ್ವರಾಜ್ಯ'ವನ್ನು ಗಳಿಸಲು ಮಹಾತ್ಮಾ ಗಾಂಧಿ ತಮ್ಮ ಜೀವನವನ್ನು ಮುಡಿಪಾಗಿಟ್ಟರು. ಈಗ ನಮ್ಮ ತಾಯಿನಾಡಿನ 'ಸ್ವಚ್ಛತೆ'ಗಾಗಿ ನಮ್ಮನ್ನು ನಾವು ಮುಡಿಪಾಗಿಸುವ ಕಾಲ ಒದಗಿ ಬಂದಿದೆ.

ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಹೇಳುವಂತೆ, ಸ್ವಚ್ಛತೆಗಾಗಿ ಪ್ರತಿಯೊಬ್ಬರು ವಾರದಲ್ಲಿ ಎರಡು ಗಂಟೆಗಳ ಕಾಲ ಅಂದರೆ ವರ್ಷವೊಂದಕ್ಕೆ ನೂರು ಗಂಟೆಗಳ ಕಾಲ ಮುಡಿಪಾಗಿರಿಸಬೇಕೆಂದು ಅವರು ದೇಶವಾಸಿಗಳಲ್ಲಿ ವಿನಂತಿಸಿಕೊಂಡಿದ್ದಾರೆ. ಇನ್ನು ಮುಂದೆ ಮಲೀನತೆಗೆ ಭಾರತದಲ್ಲಿ ಎಡೆಯಿಲ್ಲ, ಭಾರತ ಅಸ್ವಚ್ಛವಾಗಿರಲು ನಾವು ಬಿಡುವಂತಿಲ್ಲ. ಅಕ್ಟೋಬರ್ 2ರಂದು ಅವರು ಸ್ವತಃ ಪೊರಕೆ ಹಿಡಿದು ಈ ಪವಿತ್ರ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ.

'ಸ್ವಚ್ಛತೆ' ಮತ್ತು 'ಅಭಿವೃದ್ಧಿ' ಒಂದೊಕ್ಕೊಂದು ಸಂಬಂಧಿತ ಪದಗಳು. 'ಸ್ವಚ್ಛತೆ' ಇಲ್ಲದೆ ಅಭಿವೃದ್ಧಿ ಸಾಧಿಸಲಾಗದು. ಅಭಿವೃದ್ಧಿ ಅದು ಮಾನವನಿಗಾಗಿ ಮತ್ತು ಅದು ಅವನಿಂದಲೇ ನಡೆಯುವ ಕ್ರಿಯೆ. ವ್ಯಕ್ತಿಯ ಆರೋಗ್ಯಕರ ಚಿಂತನೆಗೆ ಪೂರಕ ಸ್ವಚ್ಛ ಪರಿಸರ ಪ್ರಾಥಮಿಕ ಅಗತ್ಯಗಳಲ್ಲೊಂದಾಗಿದೆ. ಸುಸ್ಥಿರ ಅಭಿವೃದ್ಧಿಯು ಕೇವಲ ಆರ್ಥಿಕ ಬೆಳವಣಿಗೆ ಹೊಂದುವ ಅಭಿವೃದ್ಧಿ ಮಾತ್ರ ಅಲ್ಲ. ಅಭಿವೃದ್ಧಿಯ ದೃಷ್ಟಿಕೋನದಿಂದ ಆರ್ಥಿಕ ಬೆಳವಣಿಗೆ ಮುಖ್ಯ ಅಂಶ. ಆದರೆ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಂತೆ ದೇಶದ ಎಲ್ಲಾ ಜನರ ಜೀವನ ಮಟ್ಟ ಅದೇ ರೀತಿಯಲ್ಲಿ ಉತ್ತಮಗೊಳ್ಳಬೇಕು.

ಅಭಿವೃದ್ಧಿಯೆಂದರೆ ಕೇವಲ ಕಣ್ಣಿಗೆ ಕಾಣುವ ಕಟ್ಟಡ ನಿರ್ಮಾಣ, ರಸ್ತೆ, ಕಾಮಗಾರಿ ಮಾತ್ರ ಅಲ್ಲ. ಕಣ್ಣಿಗೆ ಕಾಣದಿರುವ ಆದರೆ ಅಭಿವೃದ್ಧಿಗೆ ಪೂರಕವಾಗಿರುವ ಅಂಶಗಳನ್ನು ಸಹ ಪರಿಗಣಿಸುವ ಅಗತ್ಯವಿದೆ. ಅಂದರೆ, ಜ್ಞಾನಾರ್ಜನೆಗೆ ಹೆಚ್ಚಿನ ಅವಕಾಶವಿರುವ, ಉತ್ತಮ ಪೌಷ್ಟಿಕತೆ ಹಾಗು ಆರೋಗ್ಯ ಸೇವೆಗಳು, ಹೆಚ್ಚು ಸುಭದ್ರವಾದ ಜೀವನೋಪಾಯ, ಅಪರಾಧ ಮತ್ತು ದೈಹಿಕ ಹಿಂಸೆಯ ವಿರುದ್ಧದ ರಕ್ಷಣೆಯ ಬದುಕು, ರಾಜಕೀಯ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯ ಇತ್ಯಾದಿಯನ್ನು ಸಹ ಪರಿಗಣಿಸಬೇಕಾಗುತ್ತದೆ.

ಅಭಿವೃದ್ಧಿಯ ಮುಖ್ಯ ಉದ್ದೇಶವೆಂದರೆ, ಜನರು ದೀರ್ಘವಾದ, ಆರೋಗ್ಯಕರ ಮತ್ತು ತೃಪ್ತಿಕರವಾದ ಜೀವನವನ್ನು ಹೊಂದಲು ಸಾಧ್ಯಗೊಳಿಸುವ ವಾತಾವರಣವನ್ನು ನಿರ್ಮಾಣ ಮಾಡುವುದು. ಇದಕ್ಕೆ ಸ್ವಚ್ಛ ಪರಿಸರ ಅತ್ಯಂತ ಪ್ರಮುಖವಾದುದು.

ಯು.ಎನ್.ಡಿ.ಪಿ. ಸಂಸ್ಥೆಯು 1990ರಿಂದ ಪ್ರತಿ ವರ್ಷ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸುತ್ತಿದೆ. ಈ ಮಾನವ ಅಭಿವೃದ್ಧಿ ವರದಿಗಳು ಮಾನವ ಅಭಿವೃದ್ಧಿ ಸೂಚ್ಯಂಕ (ಹೆಚ್.ಡಿ.ಐ) ಗಳಿಗೆ ತುಲನಾತ್ಮಕ ದತ್ತಾಂಶಗಳ ಆಧಾರದಲ್ಲಿ ಪ್ರತಿ ದೇಶವು ಸಾಧಿಸಿದ ಪ್ರಗತಿಗೆ ಅನುಗುಣವಾಗಿ ದೇಶವಾರು ಶ್ರೇಣಿಗಳನ್ನು ಪ್ರತಿ ವರ್ಷವೂ ನೀಡುತ್ತಾ ಬಂದಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು ಸಮಗ್ರವಾದ ಒಂದು ಸೂಚಿಯಾಗಿದ್ದು, ಆರೋಗ್ಯ, ಶಿಕ್ಷಣ ಮತ್ತು ಆದಾಯದ ಮೂರು ಮುಖ್ಯ ಅಂಶಗಳನ್ನು ಒಳಗೊಂಡಿದೆ. ದೀರ್ಘವಾದ ಮತ್ತು ಆರೋಗ್ಯಕರವಾದ ಜೀವನ: ಇದನ್ನು ಜನನ ಕಾಲದ ನಿರೀಕ್ಷಿತ ಆಯಸ್ಸಿನ ಮೂಲಕ ಅಳೆಯಲಾಗುತ್ತಿದೆ.

**ನೀರು ಮತ್ತು ನೈರ್ಮಲ್ಯದ ಕುರಿತು ಕೆಲವು ಅಂಕಿ ಅಂಶಗಳು:**

- ವಿಶ್ವ ಮಟ್ಟದಲ್ಲಿ ಬಯಲು ಮಲ ವಿಸರ್ಜನೆಗೆ ಹೋಗುವ 1.1 ಬಿಲಿಯನ್ ಜನರ ಪೈಕಿ ಶೇ. 59ರಷ್ಟು ಜನರು ಭಾರತದಲ್ಲಿದ್ದಾರೆ.
- 2011ರ ಜನಗಣತಿಯಂತೆ, ಶೇ.32. 70 ಗ್ರಾಮೀಣ ಕುಟುಂಬಗಳಲ್ಲಿ ಮಾತ್ರ ಶೌಚಾಲಯ ವ್ಯವಸ್ಥೆ ಇದೆ.
- ಭಾರತದ 97 ಮಿಲಿಯನ್ ಜನರು ಶುದ್ಧ ಕುಡಿಯುವ ನೀರಿನ ಮೂಲವನ್ನು ಹೊಂದಲು ವಿಫಲರಾಗಿದ್ದಾರೆ
- ಕಲುಷಿತ ನೀರಿನ ಸೇವನೆಯಿಂದ ಅಂದಾಜು 1.6 ಮಿಲಿಯನ್ ಮಕ್ಕಳು ಬೇಧಿ ಹಾಗೂ ಕರುಳಿನ ಅಸ್ವಸ್ಥತೆಯಿಂದ ನರಳುತ್ತಿದ್ದಾರೆ.
- ನೀರಿನಲ್ಲಿ ಹೆಚ್ಚಿದ ಪ್ಲೋರೈಡ್ ಸೇವನೆಯಿಂದ ದೇಶದ 17 ರಾಜ್ಯಗಳ 200 ಜಿಲ್ಲೆಗಳಲ್ಲಿ ಅಂದಾಜು 66 ಮಿಲಿಯನ್ ಜನಸಂಖ್ಯೆ ಅಪಾಯವನ್ನು ಎದುರಿಸುತ್ತಿದೆ.

ನೈರ್ಮಲ್ಯದ ಬಗ್ಗೆ ಮಹಾತ್ಮ ಗಾಂಧೀಜಿಯವರು ಹೀಗೆ ಹೇಳಿದ್ದಾರೆ " ನಮ್ಮ ಸ್ಥಳೀಯ ಸಂಘ ಸಂಸ್ಥೆಗಳಿಗೆ ಇರುವ ಅತೀ ಕಷ್ಟದ ಕೆಲಸವೆಂದರೆ ಗ್ರಾಮ ನೈರ್ಮಲ್ಯದ ಕೆಲಸ. ಯಾವ ಸರ್ಕಾರವೇ ಆದರೂ ಹಳ್ಳಿಗರ ಸಹಕಾರವಿಲ್ಲದೆ ಅವರ ಅಭ್ಯಾಸವನ್ನು ಬದಲಿಸಲು ಸಾಧ್ಯವಿಲ್ಲ. ಅವರ ಸಹಕಾರ ದೊರೆತರೆ, ಸರ್ಕಾರ ಮಾಡಬೇಕಾದ ಕೆಲಸ ತುಂಬಾ ಕಡಿಮೆ. ವೈದ್ಯರು ಮತ್ತು ವಿದ್ಯಾವಂತರು ಮನಪೂರ್ವಕವಾಗಿ ಹಳ್ಳಿಗಳಲ್ಲಿ ದುಡಿದರೆ ಹಳ್ಳಿಯ ಆರೋಗ್ಯ ಸಮಸ್ಯೆಯನ್ನು ಹೋಗಲಾಡಿಸಬಹುದು. ವೈಯಕ್ತಿಕ ಮತ್ತು ಸಾಮಾಜಿಕ ಆರೋಗ್ಯದ ಕಡೆಗೆ ಗಮನ ಹರಿಸುವುದು ಶಿಕ್ಷಣದ ಮೊದಲ ಹೆಜ್ಜೆ."

**'ಸ್ವಚ್ಛತೆ' ಅಥವಾ ಸಂಪೂರ್ಣ ನೈರ್ಮಲ್ಯ ಆಂದೋಲನದ ಉದ್ದೇಶಗಳು:**

- ಗ್ರಾಮೀಣ ಜನರ ಜೀವನ ಗುಣಮಟ್ಟ ಮತ್ತು ಆರೋಗ್ಯದಲ್ಲಿ ಸುಧಾರಣೆ ತರುವುದು
- ಜನರಿಗೆ ಶುಚಿತ್ವದ ಬಗ್ಗೆ ಅರಿವು, ಮಾಹಿತಿ ಮತ್ತು ಆರೋಗ್ಯ ಶಿಕ್ಷಣ ನೀಡುವುದು
- ಗ್ರಾಮೀಣ ಪ್ರದೇಶದ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ನೈರ್ಮಲ್ಯ ಸೌಲಭ್ಯ ಒದಗಿಸುವುದು
- ಗ್ರಾಮೀಣ ವಿಧ್ಯಾರ್ಥಿಗಳಲ್ಲಿ ಶುಚಿತ್ವ ಮತ್ತು ನೈರ್ಮಲ್ಯದ ಬಗ್ಗೆ ಹವ್ಯಾಸವನ್ನು ಬೆಳೆಸುವುದು
- ಬಯಲು ಮಲವಿಸರ್ಜನೆಯನ್ನು ಹೋಗಲಾಡಿಸುವುದು
- ಕಡಿಮೆ ವೆಚ್ಚದಲ್ಲಿ ಸೂಕ್ತ ತಾಂತ್ರಿಕತೆಯುಳ್ಳ ನೈರ್ಮಲ್ಯದ ಸೌಲಭ್ಯಗಳನ್ನು ಪ್ರೋತ್ಸಾಹಿಸುವುದು.

**'ಸ್ವಚ್ಛತೆ' ಸಾಧಿಸಲು ಮುಖ್ಯ ಚಟುವಟಿಕೆಗಳು:**

ಸಂಪೂರ್ಣ 'ಸ್ವಚ್ಛತಾ ಆಂದೋಲನಕ್ಕೆ ಕೆಲವು ಮುಖ್ಯ ಆದ್ಯತೆಗಳಿವೆ. ಅವುಗಳು ಹೀಗಿವೆ:

- ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ

- ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣ
- ಶಾಲಾ ಶೌಚಾಲಯ ನಿರ್ಮಾಣಕ್ಕೆ ವ್ಯವಸ್ಥೆ
- ಸಮುದಾಯ ಶೌಚಾಲಯ ನಿರ್ಮಾಣ
- ಗ್ರಾಮೀಣ ನೈರ್ಮಲ್ಯ ಮಳಿಗೆಗಳು ಮತ್ತು ಉತ್ಪಾದನಾ ಕೇಂದ್ರಗಳು

ಶೌಚಾಲಯ ನಿರ್ಮಾಣಕ್ಕೆ ಆರ್ಥಿಕ ಸಹಾಯವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ಥಳೀಯ ಸರ್ಕಾರಗಳ ಮೂಲಕ ಕುಟುಂಬ, ಅಂಗನವಾಡಿಗಳಿಗೆ, ಶಾಲೆಗಳಿಗೆ ಮತ್ತು ಸಮುದಾಯಕ್ಕೆ ನೀಡುತ್ತಿವೆ.

ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯತುಗಳಲ್ಲಿ ಇದಕ್ಕಾಗಿ ಉಪಸಮಿತಿಗಳನ್ನು ನೇಮಿಸಿ ಸಮುದಾಯ ಭಾಗವಹಿಸುವಿಕೆಗೆ ಒತ್ತು ನೀಡಲಾಗಿದೆ.

ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ:

ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು ನೇರವಾಗಿ ಗ್ರಾಮ ಪಂಚಾಯಿತಿಯ ಕಾರ್ಯ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಬೇಕಾಗಿದೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ 1,000 ಜನಸಂಖ್ಯೆಯನ್ನು ಮೀರಿದ ಕಂದಾಯ ಗ್ರಾಮಗಳಿಗೆ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳ ರಚನೆ ಮಾಡಬೇಕಿದೆ. ಈ ಸಮಿತಿಗಳ ರಚನೆಯ ಮುಖ್ಯ **ಉದ್ದೇಶಗಳು ಹೀಗಿವೆ:**

- ಗ್ರಾಮದ ಜನರಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವುದನ್ನು ಖಾತರಿ ಪಡಿಸುವುದು.
- ಗ್ರಾಮದಲ್ಲಿನ ನೈರ್ಮಲ್ಯ ಪರಿಸ್ಥಿತಿಯನ್ನು ಸುಧಾರಿಸುವುದು ಮತ್ತು ಎಲ್ಲಾ ಕುಟುಂಬಗಳು ಶೌಚಾಲಯವನ್ನು ಹೊಂದುವಂತೆ ನೋಡಿಕೊಳ್ಳುವುದು.
- ಗ್ರಾಮ ಪಂಚಾಯಿತಿಯ ಸಹಕಾರ ಮತ್ತು ಸಮನ್ವಯದೊಂದಿಗೆ ಸಮುದಾಯದಲ್ಲಿ ಆರೋಗ್ಯದ ಬಗ್ಗೆ ತಿಳುವಳಿಕೆ ಮೂಡಿಸುವುದು.
- ಆರೋಗ್ಯ ಪರಿಸ್ಥಿತಿಯ ಸುಧಾರಣೆಯ ಪ್ರಯತ್ನದಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು.
- ತಮ್ಮ ಗ್ರಾಮದ ಆರೋಗ್ಯ ಪರಿಸ್ಥಿತಿಯ ಸುಧಾರಣೆಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.

ಸ್ವತಂತ್ರ ಭಾರತದಲ್ಲಿ ಸ್ವಚ್ಛತೆಗಾಗಿಯೇ ಅನೇಕ ಯೋಜನೆಗಳು ರಾಜ್ಯ ಮತ್ತು ಕೇಂದ್ರ ಸರಕಾರಗಳು ಅನುಷ್ಠಾನಗೊಳಿಸುತ್ತಿವೆ. ಇವುಗಳಲ್ಲಿ "ಸ್ವಚ್ಛ ಭಾರತ ಮಿಷನ್", "ನಿರ್ಮಲ ಭಾರತ್ ಅಭಿಯಾನ" ಮತ್ತು "ಸಂಪೂರ್ಣ ನೈರ್ಮಲ್ಯ ಆಂದೋಲನ"ವು ಸೇರಿದೆ. ನಿರ್ಮಲ ಭಾರತ್ ಅಭಿಯಾನದಡಿ ಫಲಾನುಭವಿಗಳಿಗೆ ರೂ.10,000/– ಪ್ರೋತ್ಸಾಹಧನ ನೀಡಲಾಗುತ್ತಿತ್ತು. ದಿನಾಂಕ 02.10.2014 ರ ನಂತರ ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣ ಮಾಡಿಕೊಂಡ ಫಲಾನುಭವಿಗಳಿಗೆ ಒಟ್ಟಾರೆ ರೂ.12,000/– ಗಳನ್ನು ಹಾಗೂ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಕುಟುಂಬಗಳಿಗೆ ರೂ 15,000/– ಗಳನ್ನು ಪ್ರತೀ ಘಟಕಕ್ಕೆ "ಸ್ವಚ್ಛ ಭಾರತ ಮಿಷನ್" ಯೋಜನೆಯಡಿ ನೀಡಲಾಗುತ್ತಿದೆ.

ಗ್ರಾಮೀಣ ಪ್ರದೇಶದ ಜನರಿಗೆ ಶೌಚಾಲಯ ಹೊಂದಲು ಮತ್ತು ಖಡ್ಡಾಯವಾಗಿ ಬಳಕೆಯ ಬಗ್ಗೆ ಮನವೊಲಿಸುವ ಸ್ವಚ್ಛತಾ ಪ್ರೇರಕರಿಗೆ ಈ ಯೋಜನೆಯ ವತಿಯಿಂದ ರೂ.150/–ನ್ನು ಪ್ರೋತ್ಸಾಹ ದನವನ್ನಾಗಿ ನೀಡಲಾಗುವುದು.

ನಮ್ಮ ಗ್ರಾಮಗಳು ಸ್ವಚ್ಛತೆಯ ತಾಣವಾಗಬೇಕು. ಬಯಲು ಶೌಚಾಲಯಕ್ಕೆ ವಿದಾಯ ಹೇಳಬೇಕು. ಹಳ್ಳಿಗಳ ಪ್ರತಿ ಕುಟುಂಬವು ಶೌಚಾಲಯ ಹೊಂದಬೇಕು. ಅದಕ್ಕಾಗಿ ಇದನ್ನು ಆಂದೋಲನ ರೂಪದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯನ್ನು ಸರ್ಕಾರವು ಸಮುದಾಯದ ಸಹಭಾಗಿತ್ವದೊಂದಿಗೆ ಜಾರಿಗೊಳಿಸುತ್ತಿದೆ. ಇದಕಾಗಿ ಸರಕಾರ ಪ್ರಮುಖ ವ್ಯಕ್ತಿಗಳನ್ನು(ರಾಜಕೀಯ ಮತ್ತು ಧಾರ್ಮಿಕ ನಾಯಕರು, ಮಹಾಪೌರರು, ಸರಪಂಚರು ಮತ್ತು ಉದ್ಯಮ ನಾಯಕರು, ಕ್ರೀಡಾಪಟುಗಳು, ಸಿನೇಮಾ ತಾರೆಗಳು) ರಾಯಭಾರಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

ಸ್ವಚ್ಛತೆ ಬಗ್ಗೆ ಕೇವಲ ಜಾಗೃತಿ ಮೂಡಿಸಿದರೆ ಸಾಲದು, ನಾವು ನಮ್ಮ ನಮ್ಮ ಮನೆಗಳು, ಕಾರ್ಯಾಲಯಗಳು, ಹಳ್ಳಿಗಳು, ಪಟ್ಟಣಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಶುಚಿಗೊಳಿಸುವ ಪ್ರಯತ್ನ ಮತ್ತು ಯೋಜನೆಯಲ್ಲಿ ಎಲ್ಲರೂ, ವಿಶೇಷವಾಗಿ ರಾಜಕೀಯ ಮತ್ತು ಧಾರ್ಮಿಕ ನಾಯಕರು, ಮಹಾಪೌರರು, ಸರಪಂಚರು ಮತ್ತು ಉದ್ಯಮ ನಾಯಕರು ಹೃದಯಪೂರ್ವಕವಾಗಿ ಭಾಗಿಯಾಗಬೇಕು. ಸ್ವಚ್ಛತೆ ಕಾರ್ಯ ಒಂದು ದಿನ ಮಾಡಿ ಬಿಡುವಂಥದ್ದಲ್ಲ. ಅದು ನಿತ್ಯ ನಿರಂತರ ನಡೆಯಬೇಕಾದುದು. ಸ್ವಚ್ಛ ಭಾರತದ ಕನಸು ನನಸಾಗಲು ನಮ್ಮ ನಿಮ್ಮೆಲ್ಲರ ಸಕ್ರಿಯ, ಸಾಮೂಹಿಕ ಬೆಂಬಲ ಮತ್ತು ಪಾಲ್ಗೊಳ್ಳುವಿಕೆ ಅಗತ್ಯ.

ಇದು ಕೇವಲ ಪೌರಕಾರ್ಮಿಕರ ಕಸಬಲ್ಲ. ಇದು ನಮ್ಮ ನಿಮ್ಮೆಲ್ಲರ ಕರ್ತವ್ಯವೂ ಆಗಿದೆ. ಕಾಲಬುಡದ ಕಸ ಹೊಡೆದು ಮಾಧ್ಯಮಗಳ ಕೈಗೊಂಬೆಗಳಾಗದೆ ಅಂತರಂಗದಿಂದ ಪ್ರೇರಣೆಗೊಂಡು, ಧನ್ಯತಾ ಮನೋಭಾವನೆ, ಅರ್ಪಣಾ ಮನೋಭಾವನೆಯಿಂದ ಕಾರ್ಯೋನ್ಮುಖರಾದಾಗ ಮಾತ್ರ ಮಹಾತ್ಮಾ ಗಾಂಧಿಯವರ ಹೃದಯಕ್ಕೆ ತೀರಾ ಹತ್ತಿರವಾಗಿದ್ದ ವಿಚಾರವಾದ ಸ್ವಚ್ಛತೆಯ ಯಶಸ್ಸನ್ನು ಕಾಣಬಹುದಾಗಿದೆ.

# ಸಾವಯವ ಕೃಷಿಯತ್ತ ಒಂದು ಹೆಜ್ಜೆ

**ಶ್ರೀಮತಿ ಜಾಯ್ಸ್ ಎಮ್ ಪಿರೇರ**

ನಮ್ಮ ದೇಶ 60 ರ ದಶಕದಲ್ಲಿ ಕಂಡು ಕೇಳರಿಯದ ತೀವ್ರ ಆಹಾರದ ಅಭಾವವನ್ನು ಎದುರಿಸಲಾಗಿತ್ತು. ಈ ಸಂಧರ್ಭದಲ್ಲಿ ಹಸಿರು ಕ್ರಾಂತಿ ದೇಶದ ಬಡ ಜನರ ಹಸಿವು ನೀಗಿಸುವಲ್ಲಿ ಸಹಾಯಕಾರಿಯಾಗಿತ್ತು. ಆದರೆ ಹಸಿರು ಕ್ರಾಂತಿಯ ಹೆಸರಿನಲ್ಲಿ ಭೂಮಿಯ ಫಲವತ್ತತೆಯನ್ನು ನಾಶಮಾಡಿ ಈ ದಿನ ಭೂಮಿತಾಯಿ ಸತ್ವಹೀನಳಾಗಿದ್ದಾಳೆ. ಊಟಕ್ಕೆ ಉಪ್ಪಿನಕಾಯಿಯಂತೆ ಉಪಯೋಗಿಸಬೇಕಾದ ರಸಗೊಬ್ಬರವನ್ನು ಊಟದಂತೆ ಉಪಯೋಗಿಸಿರುವ ಪರಿಣಾಮ ಭೂಮಿಯು ತನ್ನ ಫಲವತ್ತತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿರುವ ಕಾರಣ ರಸಗೊಬ್ಬರ ಮತ್ತು ಕೀಟನಾಶಕಗಳ ಮೇಲೆ ಅವಲಂಭನೆ ಹೆಚ್ಚಾಗಿದೆ. ಈ ಅವಲಂಭನೆಯಿಂದ ರೈತನು ಸಾಲಗಾರನಾಗಿ, ಅದೇ ಕೀಟನಾಶಕವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗಗಳು ಆಗಾಗ್ಗೆ ವರದಿಯಾಗುತ್ತಿವೆ.

ಕೀಟನಾಶಕಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿ ಕೀಟಗಳಿಗೆ ನಿರೋಧಕ ಶಕ್ತಿ ಉಂಟಾಗಿ ಕೀಟಗಳ ಹಾವಳಿ ಹೆಚ್ಚಾಗಿದೆ. ಹೊಸ ಹೊಸ ಕೀಟನಾಶಕಗಳ ಆವಿಷ್ಕಾರ ಮತ್ತು ಉಪಯೋಗ ಹೆಚ್ಚಾಗಿದ್ದು, ಬೆಳೆಯುವ ಆಹಾರ ಪದಾರ್ಥಗಳು ಸಂಪೂರ್ಣವಾಗಿ ವಿಷಪೂರಿತವಾಗಿವೆ. ಆ ಆಹಾರ ಉತ್ಪನ್ನಗಳನ್ನು ಉಪಯೋಗಿಸುವ ಮನುಕುಲ ಈಗ ಹಲವಾರು ಖಾಯಿಲೆಗಳಿಗೆ ತುತ್ತಾಗಿದೆ. ಕ್ಯಾನ್ಸರ್, ಡಯಾಬಿಟಿಸ್, ಹೆಚ್ಚಿನ ರಕ್ತದೊತ್ತಡ ಇನ್ನೂ ಹಲವಾರು ಚರ್ಮದ ಖಾಯಿಲೆಗಳು ಹೆಚ್ಚಾಗಿದ್ದು ಇದನ್ನು ಸರಿಪಡಿಸಿಕೊಳ್ಳಲು ದುಬಾರಿ ಆರೋಗ್ಯ ಸೇವೆಯ ಮೊರೆ ಹೋಗಬೇಕಾಗಿದೆ.

ಈ ಪರಿಸ್ಥಿತಿಯನ್ನು ಸರಿದೂಗಿಸಿ ಭೂಮಿಯ ಫಲವತ್ತತೆಯನ್ನು ಪುನಃ ಪಡೆಯಲು ಸಾವಯವ ಕೃಷಿಯನ್ನು ಪ್ರಾರಂಭಿಸತಕ್ಕದ್ದು. ಸಾವಯವ ಕೃಷಿ ಎಂದರೆ ಸುಸ್ಥಿರ ಕೃಷಿ. ಸಾವಯವ ಪದಾರ್ಥಗಳನ್ನು ಬಳಸಿ ಮಾಡುವ ಕೃಷಿ. ಇದು ಪರಿಸರ ಸ್ನೇಹಿಯಾಗಿದ್ದು, ಯಾವುದೇ ರೀತಿಯಲ್ಲೂ ಪರಿಸರದ ಮೇಲೆ ದುಷ್ಪರಿಣಾಮ ಮಾಡುವುದಿಲ್ಲ. ಬೆಳೆಗಳನ್ನು ಸರಿಯಾದ ಯೋಜನೆಯಂತೆ ಸರದಿಯಲ್ಲಿ ಬೆಳೆಸಲಾಗುವುದು. ಸರಿಯಾದ ಸಮಯದಲ್ಲಿ ಸರಿಯಾದ ಮಣ್ಣಿನ

ಕೃಷಿ, ಹಸಿರು ಗೊಬ್ಬರಗಳು ಮತ್ತು ಸಾವಯವ ಕೀಟನಾಶಕಗಳನ್ನು ಉಪಯೋಗಿಸಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಸಾವಯವ ಕೃಷಿ ಎಂದಾಕ್ಷಣ ನಮ್ಮ ಮನಸ್ಸಿಗೆ ಮೂಡುವ ಮೊದಲ ಯೋಚನೆ 'ಇಳುವರಿ ಕಡಿಮೆ'. ಆದರೆ ಇದು ನಿಜವಲ್ಲ, ಸಾವಯವ ಕೃಷಿಗೆ ಸಣ್ಣ ಪುಟ್ಟ ತಂತ್ರಜ್ಞಾನಗಳನ್ನು ಅಳವಡಿಸಿದರೆ ಅದೇ ಸುಧಾರಿತ ಸಾವಯವ ಕೃಷಿಯಾಗುವುದು. ತಂತ್ರಜ್ಞಾನ ಎಂದಾಕ್ಷಣ ವಿಜ್ಞಾನಿಗಳು, ಸಂಶೋಧನೆ ಎಂದೆಲ್ಲಾ ತಲೆಕೆಡಿಸಿಕೊಳ್ಳಬೇಕಿಲ್ಲ. ಇವೆಲ್ಲಾ ಬಹಳ ಸರಳವಾದ ಯಾವುದೇ ರೈತನು ಮಾಡಬಹುದಾದ ಕ್ರಿಯೆಗಳು. ಸುಧಾರಿತ ಸಾವಯವ ಕೃಷಿಯ ಮೂಲಕ ಬಹಳಷ್ಟು ರೈತರು ಹೆಚ್ಚಿನ ಇಳುವರಿ ಪಡೆದು ಮಾದರಿಯಾಗಿರುವ ಹಲವಾರು ನಿದರ್ಶನಗಳನ್ನು ನೋಡಿದ್ದೇವೆ, ಕೇಳಿದ್ದೇವೆ. ಆದರೆ ಬದಲಾವಣೆ ಮಾಡುವ ಛಲವಿರಬೇಕು. ಆಗಲೇ ಸಾಧಿಸಲು ಸಾಧ್ಯ.

ನಾವೇನು ಮಾಡಬಹುದು?

ಎರೆಹುಳ ಗೊಬ್ಬರ ತಯಾರಿಕೆ, ಕಾಂಪೋಸ್ಟ್, ಜೀವಾಮೃತ, ಬೂಸ್ಟರಗಳ ತಯಾರಿಕೆ, ಸಾವಯವ ಕೀಟನಾಶಕಗಳ ತಯಾರಿಕೆ ಇನ್ನೂ ಹಲವಾರು ವಿಧಾನಗಳನ್ನು ಬಳಸಬಹುದು.

ಕೃಷಿಯಲ್ಲಿ ರೈತ ಹೆಚ್ಚಾಗಿ ತಲೆಕೆಡಿಸಿಕೊಳ್ಳುವ ವಿಷಯವೆಂದರೆ ಕೀಟಗಳ ಹಾವಳಿ. ಪ್ರತಿನಿತ್ಯ ಹೊಸ ಬಗೆಯ ಕೀಟಗಳು ಕೃಷಿಗೆ ಭಾಧಿಸುತ್ತದೆ. ವಿವಿಧ ಬೆಳೆಗಳಿಗೆ ವಿವಿಧ ಕೀಟಭಾದೆ. ಕೀಟಗಳ ಹಾವಳಿ ತಪ್ಪಿಸಲು ಸಾವಯವ ಕೀಟನಾಶಕಗಳನ್ನು ಹಲವಾರು ಬಗೆಗಳಲ್ಲಿ ಬಳಸಬಹುದು. ಒಂದು ಬಗೆ ಇಲ್ಲಿದೆ:

**ಹಸಿರೆಲೆ ಕೀಟನಾಶಕ**

ಬೇಕಾಗುವ ಸಾಮಾಗ್ರಿಗಳು:

1. 4 ವಿಧದ ಕಹಿ ಇರುವ ಎಲೆಗಳು 200 ಗ್ರಾಂ (ಬೇವು, ಆಡು ಮುಟ್ಟದ ಸೊಪ್ಪು, ಹಾಗಲ ಸೊಪ್ಪು ಇತ್ಯಾದಿ)
2. 4 ವಿಧದ ಹಾಲು ಬರುವ ಎಲೆಗಳು 200 ಗ್ರಾಂ (ಕಳ್ಳಿ ಎಲೆ, ಪಪ್ಪಾಯ, ಎಕ್ಕದ ಎಲೆಗಳು ಇತ್ಯಾದಿ)
3. 4 ವಿಧದ ವಾಸನೆ ಬರುವ ಎಲೆಗಳು 200 ಗ್ರಾಂ (ನಾಗದಾಳೆ, ಪುದಿನ, ನೀಲಗಿರಿ ಇತ್ಯಾದಿ)
4. ಗಂಜಳ 1 ಲೀ.
5. ಸೆಗಣಿ 100 ಗ್ರಾಂ
6. ಹುರುಳಿ ಕಾಳಿನ ಪುಡಿ 100 ಗ್ರಾಂ
7. ಕಪ್ಪು ಬೆಲ್ಲ 250 ಗ್ರಾಂ
8. 5 ಲೀ ಸಾಮರ್ಥ್ಯದ ಪ್ಲಾಸ್ಟಿಕ್ ಬಕೇಟು –1

ಮಾಡುವ ವಿಧಾನ:

ಎಲ್ಲಾ ಎಲೆಗಳನ್ನು ಬಿಡಿಸಿಕೊಂಡು ರುಬ್ಬಿಕೊಳ್ಳಬೇಕು. ಬೆಲ್ಲವನ್ನು ಚೆನ್ನಾಗಿ ಪುಡಿಮಾಡಿಕೊಂಡು ಪ್ಲಾಸ್ಟಿಕ್ ಬಕೇಟಿನಲ್ಲಿ ರುಬ್ಬಿದ ಎಲೆಗಳು, ಬೆಲ್ಲ, ಹುರುಳಿ ಹಿಟ್ಟು, ಸೆಗಣಿ, ಗಂಜಳ ಎಲ್ಲವನ್ನು ಹಾಕಿ ಚೆನ್ನಾಗಿ ಕಲೆಸಿ ಬಕೇಟಿಗೆ ಹತ್ತಿ ಬಟ್ಟೆಯನ್ನು ಮುಚ್ಚಿ 5 ದಿನವಿಡಬೇಕು. 5 ದಿನಗಳ ನಂತರ ಮಿಶ್ರಣವನ್ನು ಸೋಸಿ ಅದಕ್ಕೆ 10 ಪಟ್ಟು ನೀರು ಬೆರೆಸಿ, ಸ್ಪ್ರೇಯರ್‌ನಲ್ಲಿ ಹಾಕಿ ಬೆಳೆಗಳಿಗೆ ಸಿಂಪಡಣೆ ಮಾಡಿದರೆ ಕೀಟಗಳ ಹಾವಳಿ ತಪ್ಪಿಸಬಹುದು.

ವಿ.ಸೂ: 1. ಎಲೆಗಳ ಆಯ್ಕೆಯಲ್ಲಿ ಯಾವುದೇ ಎಲೆಗಳನ್ನು ತೆಗೆದುಕೊಳ್ಳಬಹುದು. ಕಾಡು ಎಲೆಗಳನ್ನೂ ಬಳಸಬಹುದು.

2. ಮಿಶ್ರಣ 5 ದಿನಗಳ ನಂತರ ಸೋಸಿ ಅಳತೆ ಮಾಡಿ 1:10 ಮಾಪನದಲ್ಲಿ ನೀರನ್ನು ಸೇರಿಸತಕ್ಕದ್ದು.

**ಟೊಮೊಟೊ ಬೆಳೆಯನ್ನು ಬೆಳೆದು ಹೆಚ್ಚಿನ ಲಾಭಗಳಿಸಿದ ನೈಜಘಟನೆ ಇಲ್ಲಿದೆ.**

ನನ್ನ ಹೆಸರು ನೇತ್ರಾವತಿ ಪುಟ್ಟಸ್ವಾಮಿ. ಮರಿಯನಹುಂಡಿಯಲ್ಲಿ ವಾಸವಾಗಿದ್ದೇನೆ. ದೊಡ್ಡ ಮಾರಗೌಡನಹಳ್ಳಿ ಗ್ರಾಮಪಂಚಾಯತಿಯಲ್ಲಿ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಮ್ಮದು ಕೃಷಿಕ ಕುಟುಂಬ. ನಾನು ಮತ್ತು ನನ್ನ ಗಂಡ ಇಬ್ಬರೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದು ಹೆಚ್ಚಾಗಿ ತರಕಾರಿ ಬೆಳೆಯುತ್ತೇವೆ. ಓ.ಡಿ.ಪಿ. ಸಂಸ್ಥೆ ಮೂಲಕ ಕ್ರಾಸ್ ಸಂಸ್ಥೆಯ ಸ್ವೆಪ್ ಯೋಜನೆಯಲ್ಲಿ



ಮರಿಯನಹುಂಡಿ,ಮೈಸೂರು ತಾಲ್ಲೂಕು

ನಾನೋರ್ವ ಫಲಾನುಭವಿ. ಸಂಸ್ಥೆಯು ನೀಡಿದ ತರಬೇತಿಗಳಲ್ಲಿ ಭಾಗವಹಿಸಿ ಸಾಕಷ್ಟು ಮಾಹಿತಿ ಪಡೆದಿದ್ದೇನೆ. ಯೋಜನೆಯಲ್ಲಿ ನೀಡಿದ ಟೊಮೊಟೊ ಬೀಜಗಳನ್ನು ಪಾತಿಮಾಡಿ ನಂತರ ಗಿಡಗಳನ್ನು ನಾಟಿ ಮಾಡಿ ಸಕಾಲಕ್ಕೆ ಮಳೆಯಾದ್ದರಿಂದ ಉತ್ತಮ ಇಳುವರಿ ಪಡೆಯಲು ಸಹಾಯವಾಯಿತು. ಪ್ರಾರಂಭದಲ್ಲಿ ಉತ್ತಮ ಬೆಲೆಯೂ ದೊರೆಯಿತು. ಅರ್ಧ ಎಕರೆಯಲ್ಲಿ ರೂ. 11000 ಖರ್ಚು ಮಾಡಿ 6500 ಕೆ.ಜಿ ಟೊಮೊಟೊ ಇಳುವರಿಗೆ ರೂ. 32,000 ಪಡೆದಿದ್ದಾರೆ. ಈ ಯೋಜನೆಯಿಂದ ನಮಗೆ ಎಲ್ಲಾ ರೀತಿಯಲ್ಲೂ ಒಳ್ಳೆಯದಾಗಿದೆ. ಓ.ಡಿ.ಪಿ ಮತ್ತು ಕ್ರಾಸ್ ಸಂಸ್ಥೆಗೆ ನನ್ನ ಮತ್ತು ನಮ್ಮ ಕುಟುಂಬದ ಎಲ್ಲಾ ಸದಸ್ಯರ ಧನ್ಯವಾದಗಳು.

# ಸರ್ಕಾರದ ಸವಲತ್ತುಗಳು ನಮ್ಮ ಹಕ್ಕುಗಳು

## 'ಮನಸ್ವಿನಿ'

ಕರ್ನಾಟಕ ಸರ್ಕಾರದ ಕನಸಿನ ಯೋಜನೆಗಳಾಗಿರುವ 'ಮನಸ್ವಿನಿ' ಮತ್ತು 'ಮೈತ್ರಿ' ಯೋಜನೆಗಳು 2013ರ ಆಗಸ್ಟ್ ತಿಂಗಳಿನಿಂದ ಅನ್ವಯವಾಗುವಂತೆ ಕಂದಾಯ ಇಲಾಖೆಯ ಅಡಿಯಲ್ಲಿ ರಾಜ್ಯದಾದ್ಯಂತ ಜಾರಿಗೊಂಡು ಹೋಬಳಿ ಮಟ್ಟದಲ್ಲಿರುವ ಜನಸ್ನೇಹಿ ಕೇಂದ್ರಗಳಲ್ಲಿ ಅರ್ಜಿ ಸ್ವೀಕಾರವೂ ಆರಂಭಗೊಂಡಿದೆ. ಅರ್ಜಿ ಸ್ವೀಕರಿಸಿದ 30 ದಿನದೊಳಗೆ ವಾಸಸ್ಥಳ ದೃಢೀಕರಣ ಮಾಡಿಕೊಂಡು 500 ರೂ.ಗಳ ಮಾಸಾಶನವನ್ನು ನೀಡಲಾಗುತ್ತಿದೆ.

**ಯಾರಿಗೆ?**

ಕುಟುಂಬದವರು ಮದುವೆ ಮಾಡದ ಕಾರಣಕ್ಕೋ ಇಲ್ಲವೆ ಸೂಕ್ತ ಸಮಯದಲ್ಲಿ ವರ ಸಿಗದೇ ಅಥವಾ ಇನ್ನಾವುದೋ ಕಾರಣಕ್ಕಾಗಿ ಮದುವೆಯಾಗದೇ ಉಳಿದ ಮಹಿಳೆಯರ ಬದುಕು ನಮ್ಮ ಸಮಾಜದಲ್ಲಿ ದುಸ್ತರ. ಇಂತಹ ಮಹಿಳೆಯರಿಗೆ ಪ್ರತಿ ತಿಂಗಳು 500 ರೂ. ಮಾಸಾಶನ ನೀಡುವ

ಯೋಜನೆಯೇ 'ಮನಸ್ವಿನಿ'. ವಿಚ್ಛೇದಿತರು ಹಾಗೂ ಗಂಡ ತೊರೆದು ಹೋದ ಮಹಿಳೆಯರು (ಪರಿತ್ಯಕ್ತರು) ಸಹ ಈ ಯೋಜನೆಯ ಲಾಭ ಪಡೆದುಕೊಳ್ಳಲು ಅರ್ಹರಾಗಿದ್ದಾರೆ. ವಿಚ್ಛೇದಿತರು ನ್ಯಾಯಾಲಯದಿಂದ ಪಡೆದ ವಿಚ್ಛೇದನಾ ಪತ್ರ ಅಥವಾ ಸ್ವಯಂ ದೃಢೀಕರಣ ಪತ್ರ ನೀಡಿದರೂ ಸಾಕು, ಯೋಜನೆಯ ಲಾಭ ಪಡೆದುಕೊಳ್ಳಬಹುದು.

**ಅರ್ಜಿ ಸಲ್ಲಿಸುವ ವಿಧಾನ:**

ಇದರಡಿ ಅರ್ಹ ಮಹಿಳೆಯರು ಪ್ರಯೋಜನ ಪಡೆದುಕೊಳ್ಳಲು ಆಯಾ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿರುವ ಜನಸ್ನೇಹಿ ಕೇಂದ್ರಗಳಲ್ಲಿ ಅರ್ಜಿ ಪಡೆದು ಭರ್ತಿ ಮಾಡಿಕೊಂಡು ನ್ಯಾಯಾಲಯದಿಂದ ಪಡೆದ ವಿಚ್ಛೇದನಾ ಪತ್ರ ಅಥವಾ ಸ್ವಯಂ ದೃಢೀಕರಣ ಪತ್ರ ಲಗತ್ತಿಸಿ. ಯೋಜನೆಯ ಪ್ರಯೋಜನ ಪಡೆಯಬಹುದಾಗಿದೆ.

## 'ಮೈತ್ರಿ'

ಲಿಂಗ ಅಲ್ಪಸಂಖ್ಯಾತರೆಂದು ತಮ್ಮನ್ನು ಗುರುತಿಸಿಕೊಳ್ಳುವ ಸಮುದಾಯದವರಿಗಾಗಿ, 'ಮೈತ್ರಿ' ಯೋಜನೆಯನ್ನು ಸರಕಾರ ರೂಪಿಸಿದೆ. ದೈಹಿಕ ಮತ್ತು ಮಾನಸಿಕ ಕಾರಣಕ್ಕೆ ಲಿಂಗಪರಿವರ್ತನೆ ಮಾಡಿಸಿಕೊಂಡವರು ಅಥವಾ ದೈಹಿಕ ತೊಂದರೆಯಿಂದ ಲಿಂಗ ಅಲ್ಪ ಸಂಖ್ಯಾತರೆಂದು ಗುರುತಿಸಿಕೊಂಡವರು, ಕುಟುಂಬದವರಿಂದ ದೂರವಾಗಿ ನಗರಗಳಿಗೆ ವಲಸೆ ಬಂದು ವಾಸಿಸುತ್ತಿದ್ದಾರೆ. ಈ ಸಮುದಾಯದ ಬಹುತೇಕರು ಅವಿದ್ಯಾವಂತರಾಗಿದ್ದು, ಉದ್ಯೋಗವೆಂಬುದು ಮರೀಚಿಕೆ. ಹಾಗಾಗಿಯೇ ಬಹುತೇಕರು ಭಿಕ್ಷಾಟನೆ ಅಥವಾ 'ಇನ್ನಿತರ' ಅನಿಷ್ಟ ವೃತ್ತಿಗೆ ಅನಿವಾರ್ಯವಾಗಿ ಇಳಿದಿದ್ದಾರೆ. ಈಗಾಗಲೇ ಚುನಾವಣೆ ಆಯೋಗದಲ್ಲಿ 'ಇತರೆ' (ಹೆಣ್ಣು– ಗಂಡು ಅಲ್ಲದವರು) ಎಂಬ ಪಟ್ಟಿಯಡಿ ನೋಂದಾಯಿಸಿ ಕೊಂಡವರು ಇದ್ದಾರೆ. ಇತ್ತೀಚೆಗಷ್ಟೇ ಸುಪ್ರೀಂ ಕೋರ್ಟ್ ಸಹ ಲಿಂಗ ಅಲ್ಪಸಂಖ್ಯಾತರಿಗೆ ಮಾನ್ಯತೆ ನೀಡಿ, ಉದ್ಯೋಗ ಮತ್ತು ಶಿಕ್ಷಣದಲ್ಲೂ ಮೀಸಲಾತಿ ನೀಡುವುದನ್ನು ಕಡ್ಡಾಯಗೊಳಿಸಿದೆ.

ಇಂತಹವರಿಗೆ ಪ್ರತಿ ತಿಂಗಳು 500 ರೂ. ಮಾಸಾಶನ ನೀಡಲಾಗುತ್ತಿದೆ.

## ವಿದ್ಯಾಸಿರಿ'

ಹಿಂದುಳಿದ ವಿದ್ಯಾರ್ಥಿಗಳ ಊಟ ಹಾಗೂ ವಸತಿಗಾಗಿ ರೂಪುಗೊಂಡಿರುವ 'ವಿದ್ಯಾಸಿರಿ' ಯೋಜನೆ 2013ರ ಅಕ್ಟೋಬರ್, 1 ರಿಂದ ರಾಜ್ಯದಾದ್ಯಂತ ಜಾರಿಗೊಂಡಿದೆ. 2013– 14ನೇ ಸಾಲಿನಲ್ಲಿ ಸರ್ಕಾರಿ/ಅನುದಾನಿತ ಹಾಸ್ಟೆಲ್, ವಸತಿ ಕಾಲೇಜುಗಳಲ್ಲಿ ಪ್ರವೇಶ ದೊರೆಯದ ಹಾಗೂ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಈ ಯೋಜನೆಯಿಂದ ಪ್ರಯೋಜನವಾಗುತ್ತಿದೆ. ಈ ಯೋಜನೆಗೆ ವಿದ್ಯಾರ್ಥಿಗಳಿಂದ ಹೆಚ್ಚಿನ ಬೇಡಿಕೆ ಬಂದಿದ್ದರ ಹಿನ್ನೆಲೆಯಲ್ಲಿ 2014–15ನೇ ಸಾಲಿನಿಂದ ಇದನ್ನು 50 ಸಾವಿರ ವಿದ್ಯಾರ್ಥಿಗಳಿಗೆ ಹೆಚ್ಚಿಸಿದೆ. ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಡುವ ಸರ್ಕಾರಿ/ಸ್ಥಳೀಯ ಸಂಸ್ಥೆ/ಅನುದಾನಿತ ಸಂಸ್ಥೆಗಳು/ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಯೋಜನೆಯಡಿ ನೆರವು ದೊರೆಯುತ್ತದೆ.

**ಸಹಾಯ ಧನ ಎಷ್ಟು?**

ಈ ಯೋಜನೆಯಡಿ ಮಾಸಿಕ 1,500 ರೂ.ಗಳಂತೆ ಹತ್ತು ತಿಂಗಳು ಸಹಾಯಧನವನ್ನು ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ.

**ಮಾನದಂಡಗಳು:**

- ಪ್ರವರ್ಗ–1ರ ವಿದ್ಯಾರ್ಥಿಗಳು ರೂ. 2.50 ಲಕ್ಷ .ವಾರ್ಷಿಕ ವರಮಾನ ಮಿತಿಯಲ್ಲಿರಬೇಕು
- ಪ್ರವರ್ಗ–2, 3ಎ, 3ಬಿ ವಿದ್ಯಾರ್ಥಿಗಳಿಗೆ .ವಾರ್ಷಿಕ ವರಮಾನ ಮಿತಿ ರೂ.1.00ಲಕ್ಷ ರೂಪಾಯಿ.
- ವಿದ್ಯಾರ್ಥಿಗಳು ಗ್ರಾಮೀಣ ಭಾಗದವರಾಗಿರಬೇಕು. ಹೆಣ್ಣುಮಕ್ಕಳ ಸಂಖ್ಯೆಯಲ್ಲಿ ಯಾವುದೇ ನಿರ್ಬಂಧ ಇಲ್ಲ ಆದರೆ ಕುಟುಂಬದ ಇಬ್ಬರು ಗಂಡು ಮಕ್ಕಳಿಗೆ ಮಾತ್ರ ಈ ಯೋಜನೆ ಅನ್ವಯ.
- ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ 'ವಿದ್ಯಾಸಿರಿ' ಯೋಜನೆಯನ್ನು ಸರ್ಕಾರ 2014–15ನೇ ಸಾಲಿನಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೂ ಸಹ ವಿಸ್ತರಿಸಿದೆ.
- ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ದೊರೆಯದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಹಾಗೂ ಪಿ.ಹೆಚ್.ಡಿ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

ವಿ.ಸೂ:

**ಕ್ರಿಮಿನಲ್ ಕೇಸು :**

ಸರ್ಕಾರವು ಸಾಮಾಜಿಕ ಭದ್ರತಾ ಯೋಜನೆ ದುರ್ಬಳಕೆ ಯಾಗುತ್ತಿರುವುದನ್ನು ತಡೆಯಲು ಇದೇ ಮೊದಲ ಬಾರಿಗೆ ಅನರ್ಹರು ಅರ್ಜಿ ಸಲ್ಲಿಸಿದರೆ ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ಸ್ಪಷ್ಟ ಎಚ್ಚರಿಕೆಯನ್ನು ಸಾರ್ವಜನಿಕರ ತಿಳುವಳಿಕೆಗೆ ರವಾನಿಸಿದೆ. ಅರ್ಹರು ಮಾತ್ರ ಇಂಥಹ ಯೋಜನೆಗಳನ್ನು ಪಡೆಯಬೇಕು. ಅರ್ಹರಲ್ಲದವರು ಸುಳ್ಳು ದಾಖಲೆ ನೀಡಿ ಅರ್ಜಿ ಸಲ್ಲಿಸಿ, ಫಲಾನುಭವಿಗಳಾದರೆ ಕಾನೂನು ರೀತ್ಯ ಶಿಕ್ಷಿಸುವ ಹಕ್ಕನ್ನು ಸರ್ಕಾರ ಕಾಯ್ದಿರಿಸಿಕೊಂಡಿದೆ.

# ಮಹಿಳಾ ಸಹಕಾರಿ ಸಮತಾ



ನಾನು ಸಮತಾ, ಕೊಡಿಯಾಲ ಗ್ರಾಮ ಪಂಚಾಯಿತಿಗೆ ಸೇರಿದ ಚೊಟ್ಟನಹಳ್ಳಿ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ನಾನು ಜ್ಯೋತಿರ್ ವಿಕಾಸ ಸಮಾಜ ಸೇವಾ ಸಂಸ್ಥೆಗೆ ಸೇರಿದ ಚಾಮುಂಡೇಶ್ವರಿ ಮಹಿಳಾ ಸ್ವ–ಸಹಾಯ ಸಂಘದಲ್ಲಿ ಸದಸ್ಯಳಾಗಿ 3 ವರ್ಷಗಳ ಹಿಂದೆ ಸೇರಿದ್ದೆ.

ಸಂಘಕ್ಕೆ ಸೇರುವ ಮುನ್ನ ನಾನು ಓರ್ವ ಸಾಮಾನ್ಯ ಗೃಹಿಣಿಯಾಗಿದ್ದೆ. ನನಗೆ ಅಷ್ಟೊಂದು ತಿಳುವಳಿಕೆ ಇರಲಿಲ್ಲ. ಸಂಘಕ್ಕೆ ಸೇರಿ ನಂತರ ಪಡೆದ ಮಾಹಿತಿ ಮತ್ತು ಅರಿವಿನಿಂದ ನನ್ನಲ್ಲಿ, ನನ್ನ ಕುಟುಂಬದಲ್ಲಿ, ನನ್ನ ಜೀವನದಲ್ಲಿ ಬದಲಾವಣೆಗಳಾದವು. ಸಂಘದಲ್ಲಿ ಪ್ರತಿನಿಧಿಯಾಗಿ ಆಯ್ಕೆಯಾದ ನಾನು ಸಂಘದ ಚಟುವಟಿಕೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆಯಿಂದ ಹಲವಾರು ವಿಚಾರಗಳನ್ನು ಕಲಿತೆ. ಸಂಘದ ದಾಖಲೆಗಳ ನಿರ್ವಹಣೆ ಮಾಡುವುದನ್ನು ಕಲಿತುಕೊಂಡು ಕ್ರಮೇಣ ನಾನು ನಾಯಕತ್ವ ಗುಣವನ್ನು ಬೆಳೆಸಿಕೊಂಡೆ.

ಜ್ಯೋತಿರ್ ವಿಕಾಸ ಸಮಾಜ ಸೇವಾ ಸಂಸ್ಥೆಯ ಸಂಘಗಳು ಇತರ ಸಂಘಗಳಿಗಿಂತ ವಿಭಿನ್ನವಾಗಿದೆ. ಈ ಸಂಘಗಳಲ್ಲಿ

ಕಲಿಕೆಗೆ ಅವಕಾಶವಿದೆ. ಮಹಿಳೆಯರು ಅಭಿವೃದ್ಧಿ ಹೊಂದಲು ಸಹಕಾರ ನೀಡಿ ಪ್ರೋತ್ಸಾಹಿಸುವ ವೇದಿಕೆ ಇದಾಗಿದೆ. ಜ್ಯೋತಿರ್ ವಿಕಾಸ ಸಮಾಜ ಸೇವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಕಾರ್ಯಕರ್ತೆಯರು ವಿವಿಧ ಹಕ್ಕುಗಳ ಬಗ್ಗೆ, ಲಿಂಗ ಸಮಾನತೆ, ಆರೋಗ್ಯದ ಬಗ್ಗೆ ಮಾಹಿತಿಯನ್ನು ಕ್ರಮವಾಗಿ ಮತ್ತು ನಿರಂತರವಾಗಿ ನೀಡುತಿದ್ದಾರೆ. ಸಂಸ್ಥೆಯಲ್ಲಿ ಆಯೋಜಿಸಿದ ತರಬೇತಿಗಳಿಂದ ನನ್ನ ಜ್ಞಾನಮಟ್ಟ ಹೆಚ್ಚಿರುವುದಲ್ಲದೆ ನನ್ನ ದೃಷ್ಟಿಕೋನದಲ್ಲಿ ಬದಲಾವಣೆಯುಂಟಾಯಿತು. ನಾನು ಸಂಘದಲ್ಲಿ ಕಾರ್ಯನಿರ್ವಹಿಸುವುದನ್ನು ಹಾಗೂ ನನ್ನ ಜ್ಞಾನಮಟ್ಟವನ್ನು ಗುರುತಿಸಿದ ಗ್ರಾಮದ ಸದಸ್ಯರು ನನ್ನನ್ನು ಮಹಿಳಾ ಹಾಲು ಒಕ್ಕೂಟ, ಸಹಕಾರಿ ಸಂಘದ ಅಧ್ಯಕ್ಷೆಯಾಗಿ ಆಯ್ಕೆ ಮಾಡಿದ್ದಾರೆ. ಸಾಮಾನ್ಯ ಗೃಹಿಣಿಯಾಗಿದ್ದ ನಾನು ಈಗ ಮಹಿಳಾ ಹಾಲು ಒಕ್ಕೂಟ ಸಹಕಾರಿ ಸಂಘದ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಈ ಮಹತ್ತರ ಬದಲಾವಣೆಗೆ ಜ್ಯೋತಿರ್ ವಿಕಾಸ ಸಮಾಜ ಸೇವಾ ಸಂಸ್ಥೆಯು ಸಹ ಕಾರಣವಾಗಿದೆ.

ನಾನು ಈಗ ಇತರ ಮಹಿಳೆಯರಿಗೂ ಸ್ಫೂರ್ತಿಯಾಗಿದ್ದೇನೆ. ಸ್ವಂತಿಕೆ, ಸ್ವಾಭಿಮಾನ ಮತ್ತು ಸ್ವಾವಲಂಬನೆಯಿಂದ ನನ್ನ ಕೆಲಸವನ್ನು ನಿರ್ವಹಿಸುತ್ತಿದ್ದೇನೆ. ನನ್ನ ಗ್ರಾಮದ ದಮನಿತರ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ನನ್ನ ಜೀವನದಲ್ಲಿ ಬದಲಾವಣೆಯುಂಟು ಮಾಡಿದ ಸಂಸ್ಥೆಗೆ, ಸಂಸ್ಥೆಯ ಕಾರ್ಯಕರ್ತೆಯರಿಗೆ ನನ್ನ ಚಾಮುಂಡೇಶ್ವರಿ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನನ್ನಂತೆಯೇ ಅನೇಕ ಮಹಿಳೆಯರು ನನ್ನಂತೆ ಅಭಿವೃದ್ದಿಯಾಗಬೇಕೆಂದು ನಾನು ಬಯಸುತ್ತೇನೆ.

# ವಾರ್ತಾ ವಿಶೇಷ

## ಮಕ್ಕಳ ಹಕ್ಕುಗಳು ಮತ್ತು ಉತ್ತಮ ಆಡಳಿತ ಕುರಿತು ಕಾರ್ಯಗಾರ

ಈ ಕಾರ್ಯಗಾರದಲ್ಲಿ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ಮಹಾಧರ್ಮಾಧ್ಯಕ್ಷರವರಾದ ಡಾ॥ ಬೆರ್ನಾರ್ಡ್ ಮೋರಸ್‌ರವರು ತಮ್ಮ ಸಂದೇಶದಲ್ಲಿ "ಮಕ್ಕಳ ಮೇಲಿನ ಹಿಂಸೆಯನ್ನು ಎಂದಿಗೂ ಸಹಿಸಲಾಗದು – ಮಕ್ಕಳು ನಮ್ಮ ಸಮಾಜವನ್ನು ಕಟ್ಟುವವರು, ಅವರ ಮೇಲಿನ ಕ್ರೌರ್ಯ ಅವರೊಳಗಿನ ಸುಪ್ತ ಪ್ರತಿಭೆಯನ್ನು ನಂದಿಸುತ್ತದೆ"ಎಂದರು. ಈ ಕಾರ್ಯಗಾರ ಕ್ರಾಸ್ ಸಂಸ್ಥೆಯಲ್ಲಿ ದಿನಾಂಕ ಸೆಪ್ಟೆಂಬರ್ 1 ಮತ್ತು 2, 2014ರಂದು ಜರುಗಿತು. ಈ ಕಾರ್ಯಾಗಾರದಲ್ಲಿ ಕ್ರಾಸ್‌ನ ಎಲ್ಲಾ ಪಾಲುದಾರ ಸಂಸ್ಥೆಗಳು ಮತ್ತು ಕರ್ನಾಟಕದ ಇತರ ಶಾಲಾ ಕಾಲೇಜುಗಳ 130 ಪ್ರತಿನಿಧಿಗಳು ಭಾಗವಹಿಸಿದ್ದರು. ಕ್ರಾಸ್ ಮತ್ತು ಕರ್ನಾಟಕ ಪ್ರಾಂತೀಯ ಶಿಕ್ಷಣ ಆಯೋಗ ಜಂಟಿಯಾಗಿ ಇದನ್ನು ಆಯೋಜಿಸಿತ್ತು.



## ಕ್ರಾಸ್ ಸಂಸ್ಥೆಯ ವಾರ್ಷಿಕ ಮಹಾಸಭೆ ಮತ್ತು ನಿರ್ದೇಶಕ ಮಂಡಳಿ ಸಭೆ.



ಕ್ರಾಸ್ ಸಂಸ್ಥೆಯ ನಿರ್ದೇಶಕ ಮಂಡಳಿ ಮತ್ತು ವಾರ್ಷಿಕ ಮಹಾಸಭೆಯು ಆಗಸ್ಟ್ 6 ಮತ್ತು 7 ರಂದು ಕ್ರಾಸ್‌ನಲ್ಲಿ ಜರುಗಿತು. ಈ ಸಭೆಗಳ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ ಜೆರಾಲ್ಡ್ ಐಸಾಕ್ ಲೋಬೊ, ಕ್ರಾಸ್ ಸಂಸ್ಥೆಯ ಅಧ್ಯಕ್ಷರು ಮತ್ತು ಉಡುಪಿ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರು ವಹಿಸಿದರು. ಪೂಜ್ಯರು ಸಭೆಗೆ ಆಗಮಿಸಿದ ಎಲ್ಲಾ ಆಹ್ವಾನಿತರನ್ನು ಆತ್ಮೀಯವಾಗಿ ಸ್ವಾಗತಿಸಿ, ಸಭೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಈ ಸಭೆಯಲ್ಲಿ ಕ್ರಾಸ್ ಸಂಸ್ಥೆಯ ವಾರ್ಷಿಕ ವರದಿಯನ್ನು ಪರಿಶೀಲಿಸಿ ಒಮ್ಮತದಿಂದ ಅಂಗೀಕರಿಸಲಾಯಿತು. ಹಿಂದಿನ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಂಡಿಸಲಾಯಿತು ಮತ್ತು ಮುಂದಿನ ಸಾಲಿನ ಕ್ರಿಯಾ ಯೋಜನೆಗೆ ಮಹಾಸಭೆ ಒಪ್ಪಿಗೆ ನೀಡಿತು.

## ಆಂತರಿಕ ಕಲಿಕಾ ಮತ್ತು ನಿಗಾ ವಹಿಸುವಿಕೆಯ ಕುರಿತು ಕಾರ್ಯಾಗಾರ.

ದಿನಾಂಕ ಜುಲೈ 23 ಮತ್ತು 24, 2014ರಂದು ಪುನರ್ ಸಂದರ್ಶನ ಮತ್ತು ಆಂತರಿಕ ಕಲಿಕಾ ಮತ್ತು ನಿಗಾವಹಿಸುವಿಕೆ ಮಾಪನ(Tool) ತಿದ್ದುಪಡಿಗಾಗಿ ಕಾರ್ಯಗಾರ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಕ್ರಾಸ್‌ನ 14 ಪಾಲುಗಾರ ಸಂಸ್ಥೆಗಳು ಮತ್ತು ಕರ್ನಾಟಕದ ಇತರ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಇತರ ಸಮನಸ್ಕ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಮುಕ್ತ ಮನಸ್ಸಿನಿಂದ ವ್ಯಕ್ತಪಡಿಸಿ ತಿದ್ದುಪಡಿಗೆ ತಮ್ಮ ಕೊಡುಗೆಯನ್ನು ನೀಡಿದರು.



## ಯುವಜನತೆಯ ಭವಿಷ್ಯ ನಿರೂಪಣಾ ಕಾರ್ಯಕ್ರಮದ ಉಧ್ಘಾಟನಾ ಸಮಾರಂಭ.

ದಿನಾಂಕ 21, 07 2014 ರಂದು ಕೇಂದ್ರಿಯ ಮತ್ತು ರಾಜ್ಯ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರಿಕ್ಷೆಗಳಿಗಾಗಿ ಯುವಜನತೆಯನ್ನು ಸಿದ್ಧಗೊಳಿಸುವ ಉದ್ದೇಶ ಹೊಂದಿ ತರಬೇತಿಯನ್ನು ಪ್ರಾಂಭಿಸಲಾಯಿತು.

ತರಬೇತಿಯ ಉದ್ವಾಟನೆಯನ್ನು ಶ್ರೀ ಜೆ ಅಲೆಕ್ಸಾಂಡರ್, ಐ.ಎ.ಎಸ್ (ನಿವೃತ್ತ) ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರಕಾರ ಮತ್ತು ಮಾಜಿ ಸಚಿವರು ನೆರವೇರಿಸಿದರು. ತಮ್ಮ ಉಧ್ಘಾಟನಾ ಭಾಷಣದಲ್ಲಿ ಶಿಭಿರಾರ್ಥಿಗಳಿಗೆ ತಮ್ಮ ನಿಯೋಜಿತ ಕಾರ್ಯಕ್ಷೇತ್ರದಲ್ಲಿನ ಸೇವಾ ಪ್ರಚಾರಕರಾಗಿ ಕಾರ್ಯ ನಿರ್ವಹಿಸಲು ಕರೆ ನೀಡಿದರು. ಅಧ್ಯಕ್ಷತೆಯನ್ನು ಬೆಂಗಳೂರಿನ ಮಹಾ ಧರ್ಮಾಧ್ಯಕ್ಷರವರಾದ ಡಾ ॥ ಬೆರ್ನಾರ್ಡ್ ಮೋರಸ್‌ರವರು ವಹಿಸಿದರು. ಕರ್ನಾಟಕದ ಗ್ರಾಮೀಣ ಪ್ರದೇಶಗಳಿಂದ



ಆಯ್ಕೆಗೊಂಡ 50 ಶಿಬಿರಾರ್ಥಿಗಳು ಮೌಲ್ಯಧಾರಿತ ನಾಯಕತ್ವ ತರಬೇತಿಯನ್ನು ಈ ಶಿಬಿರದಲ್ಲಿ ಪಡೆಯುತ್ತಿದ್ದಾರೆ.

## ರಾಷ್ಟ್ರೀಯ ಭಾವೈಕ್ಯತಾ ಮತ್ತು ಕೋಮು ಸಾಮರಸ್ಯ ಕಾರ್ಯಗಾರ.

ದಿನಾಂಕ 17–19 ಜುಲೈ 2014 ರಂದು ಪ್ರಾಂತೀಯ ಸಂಪನ್ಮೂಲ ಕೇಂದ್ರ, ಕ್ರಾಸ್ ಸಂಸ್ಥೆಯಲ್ಲಿ ರಾಷ್ಟಿಯ ಕೋಮು ಸೌಹಾರ್ದತೆ ಮತ್ತು ಭಾವೈಕ್ಯತಾ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಅಶೋಕ್ ರವರು ಕಾರ್ಯಗಾರವನ್ನು ನಡೆಸಿಕೊಟ್ಟರು. ಈ ಕಾರ್ಯಗಾರಕ್ಕೆ ಕರ್ನಾಟಕದ ಸಮನಸ್ಕ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ತಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಂಡರು.



## ಸಹಯೊಗ ಸಂಸ್ಥೆಗಳ ಪ್ರತಿನಿಧಿಗಳಿಂದ ಕ್ರಾಸ್ ಸಂಸ್ಥೆಗೆ ಭೇಟಿ.



ಶ್ರೀಮತಿ ಮಾರ್ಟಿನಾರವರು ಜೇಮ್ಸ್ ಪರ್ಸಿ ಫೌಂಡೇಶನ್ ಮತ್ತು ಮೀರೆಯ್ಯಾ ಮತ್ತು ಶ್ರೀ ಅಲ್ಫೊನ್ಸೊ-ಫ್ರೆಂಡ್ಲಿ ಹ್ಯಾಂಡ್ ಇವರು ಕ್ರಾಸ್ ಸಂಸ್ಥೆಗೆ ದಿನಾಂಕ 5 ಮತ್ತು 6 ಜುಲೈ 2014 ರಂದು ಭೇಟಿ ನೀಡಿದರು. ಇವರು ಕ್ರಾಸ್ ಸಂಸ್ಥೆಯ ಕಾರ್ಯಕ್ರಮದ ಅನುಸ್ಠಾನದ ಬಗ್ಗೆ ಮೌಲ್ಯ ಮಾಪನ ಮಾಡಿ, ಗ್ರಾಮೀಣ ಸಮುದಾಯದ ಅಂಚಿಗೆ ತಳ್ಳಲ್ಪಟ್ಟವರು ಮತ್ತು ಧಮನಿತರು ಈ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡರು ಎಂದು ತೃಪ್ತಿ ವ್ಯಕ್ತಪಡಿಸಿದರು.

## ಕ್ರಾಸ್ ಸಂಸ್ಥೆಯ 2013-2014 ವಾರ್ಷಿಕ ವರದಿ ಬಿಡುಗಡೆ.

ಕರ್ನಾಟಕ ಪ್ರಾಂತಿಯ ಕಥೋಲಿಕ ಧರ್ಮಾಧ್ಯಕ್ಷರುಗಳ ಸಮಿತಿಯ ಅಧ್ಯಕ್ಷರು ಮತ್ತು ಬೆಂಗಳೂರು ಮಹಾ ಧರ್ಮಕ್ಷೇತ್ರದ ಮಹಾಧರ್ಮಾಧ್ಯಕ್ಷರಾದ ಅತೀ ವಂದನೀಯ ಪೂಜ್ಯ ಡಾ॥ ಬೆರ್ನಾರ್ಡ್ ಮೊರಾಸ್‌ರವರು ಕ್ರಾಸ್ ಸಂಸ್ಥೆಯ 2013–2014 ರ ವಾರ್ಷಿಕ ವರದಿಯನ್ನು ಬಿಡುಗಡೆ ಮಾಡಿ ಮೊದಲ ಪ್ರತಿಯನ್ನು ಪೂಜ್ಯ ಥೋಮಾಸ್ ವಾಝುಪಿಳ್ಳಿ, ಉಪಾಧ್ಯಕ್ಷರು, ಕ್ರಾಸ್ ಸಂಸ್ಥೆ ಇವರಿಗೆ ನೀಡಿ, ಲೋಕಾರ್ಪಣೆ ಮಾಡಿದರು.



ಪ್ರತಿಗಳಿಗಾಗಿ ಸಂಪರ್ಕಿಸಿ :

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ, ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com